## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2016-17ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ವಲಯದ ಯೋಜನೆಯಾಗಿದ್ದು, ಇದಕ್ಕೆ ಪೂರಕವಾಗಿ ರಾಜ್ಯ ಪ್ರೋತ್ಸಾಹಧನ ಬಿಡುಗಡೆ ಕುರಿತು.**

ಓದಲಾಗಿದೆ :
1. CEO, ZP, ಬೆಳಗಾವಿ ರವರ ಪತ್ರ ಸಂಖ್ಯೆ ಜಿಪಂ/ಅವಿ/ರಾಜೈಅಯೋ/ವಿವ-01/2016-17, ದಿನಾಂಕ 1.03.2017.
2. CEO, ZP, ಉಡುಪಿ ರವರ ಪತ್ರ ಸಂಖ್ಯೆ ಉಜಿಪಂ/ಅಭಿವೃದ್ಧಿ/ ಸಿಆರ್-17/2016-17/373, ದಿನಾಂಕ 15.12.2016.

## ಪ್ರಸ್ತಾವನೆ :

**2016-17**ನೇ ಸಾಲಿನ ರಾಜ್ಯ ಆಯವ್ಯಯದ ಲೆಕ್ಕ **ಶೀರ್ಷಿಕೆ 2810-60-196-6-01**ರಡಿ **ರೂ.1344.00ಲಕ್ಷ**ಗಳನ್ನು ಕೇಂದ್ರ ಹಾಗೂ ರಾಜ್ಯ ಪಾಲಿನಡಿ ನಿಗದಿಪಡಿಸಿದೆ. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ವಲಯದ ಯೋಜನೆಯಾಗಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ರಾಜ್ಯ ಪ್ರೋತ್ಸಾಹಧನವನ್ನು ನೀಡಿ ಕಾರ್ಯಕ್ರಮವನ್ನು ಉತ್ತೇಜಿಸಲಾಗುತ್ತಿದೆ.

**2016-17**ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು **10000** ಜೈವಾನಿಲ ಸ್ಥಾವರಗಳ ಗುರಿ ನಿಗದಿಪಡಿಸಿದ್ದು, **ಫೆಬ್ರವರಿ 2017**ರ ಅಂತ್ಯದವರೆಗಿನ ತಾತ್ಕಾಲಿಕ ಪ್ರಗತಿ ಆಧರಿಸಿ (ಪೂರ್ಣಗೊಂಡ ಹಾಗೂ ನಿರ್ಮಾಣ ಹಂತದಲ್ಲಿರುವ ಘಟಕಗಳನ್ನೊಳಗೊಂಡಂತೆ) ಮತ್ತು ಓದಲಾದ ಮೇಲಿನ (1)&(2) ಪತ್ರಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಹಾಗೂ ಉಡುಪಿ ರವರ ಕೋರಿಕೆಯನ್ವಯ **2013-14** ಮತ್ತು **2014-15**ನೇ ಸಾಲಿನಲ್ಲಿ ನಿರ್ಮಿಸಲಾದ ಸ್ಥಾವರಗಳಿಗೆ ಬಾಕಿ ಇರುವ ಅನುದಾನ ಸೇರಿದಂತೆ **ರೂ.175.00ಲಕ್ಷ**ಗಳನ್ನು **ಲೆಕ್ಕ ಶೀರ್ಷಿಕೆ 2810-60-196-6-01**ರಡಿ ಅಗತ್ಯವಿರುವ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/04/ಜೈಅಯೋ/2017, ಬೆಂಗಳೂರು, ದಿನಾಂಕ 07.03.2017.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2016-17**ನೇ ಸಾಲಿನಲ್ಲಿ, ಕಾರ್ಯಕ್ರಮದಡಿ **ಫೆಬ್ರವರಿ 2017**(ತಾತ್ಕಾಲಿಕ)ರ ಅಂತ್ಯಕ್ಕೆ ಸಾಧಿಸಿದ ಪ್ರಗತಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಮತ್ತು ಉಡುಪಿ ರವರು ಕೋರಿಕೆ ಪರಿಗಣಿಸಿ **2013-14 ಮತ್ತು 2014-15**ನೇ ಸಾಲಿನಲ್ಲಿ ನಿರ್ಮಿಸಲಾದ ಸ್ಥಾವರಗಳಿಗೆ ಬಾಕಿ ಇರುವ ಅನುದಾನ ಸೇರಿದಂತೆ **ರೂ.175.00ಲಕ್ಷ (ಒಂದು ನೂರಾ ಎಪ್ಪತ್ತೈದು ರೂಪಾಯಿಗಳು ಮಾತ್ರ)**ಗಳನ್ನು **ಲೆಕ್ಕ ಶೀರ್ಷಿಕೆ 2810-60-196-6-01**ರಡಿ **ಅನುಬಂಧ**ದಲ್ಲಿ ಹಂಚಿಕೆ ಮಾಡಿದಂತೆ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಆರ್ಥಿಕ ಇಲಾಖೆಯಿಂದ **ದಿನಾಂಕ 14.12.2016** ರಂದು ಲೆಕ್ಕ ಶೀರ್ಷಿಕೆ **2810-60-196-6-01**ರಡಿ ಉಡುಪಿ ಜಿಲ್ಲೆಗೆ ಬಿಡುಗಡೆಯಾದ **ರೂ.4.25 ಲಕ್ಷ** ಅನುದಾನದ ಪೈಕಿ **ರೂ.1.24 ಲಕ್ಷ**ಗಳನ್ನು **2013-14**ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸಹಾಯಧನ ಪಾವತಿಸಲು ವಿನಿಯೋಗಿಸತಕ್ಕದ್ದು. ಇದರಿಂದಾಗಿ **ಬೆಳಗಾವಿ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ 2013-14 & 2014-15ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ರಾಜ್ಯ ಸಹಾಯಧನ ಪಾವತಿಸಲು ಬಾಕಿ ಇರುವುದಿಲ್ಲವೆಂದು ತಿಳಿಸಿದೆ.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ. **ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು.**

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 03 ಟಿಎಫ್‌ಪಿ 2016 ದಿನಾಂಕ 02.04.2016ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದಡಿ ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 70 ಪಿಬಿಎಸ್ 2017, ದಿನಾಂಕ 22.02.2017ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್ ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಳಗಾವಿ, ಬೀದರ್, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗದಗ, ಹಾಸನ, ಕಲಬುರಗಿ, ಕೋಲಾರ, ರಾಮನಗರ, ತುಮಕೂರು, ಉತ್ತರ ಕನ್ನಡ, ಉಡುಪಿ, ವಿಜಯಪುರ ಮತ್ತು ಯಾದಗಿರಿ
3. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಳಗಾವಿ, ಬೀದರ್, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಗದಗ, ಹಾಸನ, ಕಲಬುರಗಿ, ಕೋಲಾರ, ರಾಮನಗರ, ತುಮಕೂರು, ಉತ್ತರ ಕನ್ನಡ, ಉಡುಪಿ, ವಿಜಯಪುರ ಮತ್ತು ಯಾದಗಿರಿ
4. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಪತ್ರ ಸಂಖ್ಯೆ 04 ಜೈಅಯೋ 2017, ದಿನಾಂಕ 07.03.2017ಕ್ಕೆ ಅನುಬಂಧ.

| ಕ್ರ.ಸಂ | ಜಿಲ್ಲೆ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬಾಗಲಕೋಟೆ | 8.00 |
| 2 | ಬೆಂಗಳೂರು (ಗ್ರಾ) | 9.21 |
| 3 | ಬೆಳಗಾಂ | 75.00 |
| 4 | ಬೀದರ್ | 15.44 |
| 5 | ಚಿಕ್ಕಬಳ್ಳಾಪುರ | 10.25 |
| 6 | ಚಿತ್ರದುರ್ಗ | 0.32 |
| 7 | ದಕ್ಷಿಣ ಕನ್ನಡ | 0.13 |
| 8 | ದಾವಣಗೆರೆ | 1.32 |
| 9 | ಗದಗ | 0.15 |
| 10 | ಹಾಸನ | 0.28 |
| 11 | ಕಲಬುರಗಿ | 16.67 |
| 12 | ಕೋಲಾರ | 2.65 |
| 13 | ರಾಮನಗರ | 1.70 |
| 14 | ತುಮಕೂರು | 4.91 |
| 15 | ಉತ್ತರ ಕನ್ನಡ | 5.72 |
| 16 | ಉಡುಪಿ | 9.09 |
| 17 | ವಿಜಯಪುರ | 8.07 |
| 18 | ಯಾದಗಿರಿ | 6.09 |
| | **ಒಟ್ಟು** | **175.00** |

ನಿರ್ದೇಶಕರು( ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ